ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN-573201

Website: www.hims-hassan.org Phone Fax No.08172-231699

ಸಂಖ್ಯೆ:ಹಿಮ್ಸ್/ಸ್ಥಾಪನೆ(1)/08/2021-22 ದಿನಾಂಕ:29.06.2021

# ಸುತ್ತೋಲೆ

ವಿಷಯ: ಕಡ್ಡಾಯ ಸೇವೆಗೆ ನಿಯುಕ್ತಿಗೊಳಿಸಲಾದ ಅಭ್ಯರ್ಥಿಗಳಿಗಾಗಿ ಸಮಾಲೋಚನಾ ಸಭೆ ಏರ್ಪಡಿಸುವ ಬಗ್ಗೆ.

ಉಲ್ಲೇಖ:ಆಯುಕ್ತರು.ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಹೆಚ್ಎಸ್/ಜಿ.ಇ.ಸಿ/07/2021-22. ದಿನಾಂಕ: 23-06-2021.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ. ಕರ್ನಾಟಕ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದಡಿ ಆಯ್ಕೆ ಹೊಂದಿ ಎಂ.ಬಿ.ಬಿ.ಎಸ್. ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳನ್ನು ಒಂದು ವರ್ಷದ ಕಡ್ಡಾಯ ಸೇವೆಗೆ ನೇಮಿಸಿ ಹೊರಡಿಸಲಾಗಿರುವ ಉಲ್ಲೇಖಿತ ಆದೇಶಾನುಸಾರ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ನಿಯುಕ್ತಿಗೊಳಿಸಲಾದ ಅಭ್ಯರ್ಥಿಗಳಿಗೆ ಸಂಸ್ಥೆಯಲ್ಲಿನ ವಿವಿಧ ವಿಭಾಗಗಳಲ್ಲಿ ಖಾಲಿಯಿರುವ ಜೂನಿಯರ್ ರೆಸಿಡೆಂಟ್/ ಟ್ಯೂಟರ್ ಹುದ್ದೆಗಳಿಗೆ ಮೆರಿಟ್ ಆಧಾರದ ಮೇಲೆ ತಾವು ಇಚ್ಛಿಸಬಹುದಾದ ವಿಭಾಗಗಳನ್ನು ಸ್ವತಃ ಆಯ್ಕೆ ಮಾಡಿಕೊಳ್ಳಲು **ಸಮಾಲೋಚನಾ ಸಭೆಯನ್ನು ದಿನಾಂಕ:01.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಉಪನ್ಯಾಸಕರ ಕೊಠಡಿ-1** ಇಲ್ಲಿ ಏರ್ಪಡಿಸಲಾಗಿರುತ್ತದೆ.

ಮೇಲ್ಕಂಡಂತೆ ದಿನಾಂಕ: 25.06.2021 ರಿಂದ ದಿನಾಂಕ:30.06.2021 ರ ವರೆಗೆ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲಾದ ಅಭ್ಯರ್ಥಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಹಾಜರಾಗುವುದು ಹಾಗೂ ಅಂದೇ ನಿಯೋಜಿಸಿದ ವಿಭಾಗಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಹೀಗೆ ಅಭ್ಯರ್ಥಿಗಳು ಒಮ್ಮೆ ಆಯ್ಕೆ ಮಾಡಿಕೊಂಡ ವಿಭಾಗವನ್ನು ಒಂದು ವರ್ಷದ ಕಡ್ಡಾಯ ಸೇವೆ ಪೂರ್ಣಗೊಳಿಸುವವರೆಗೆ ಯಾವುದೇ ಕಾರಣಕ್ಕೂ ಮತ್ತೆ ಬದಲಿಸಲು ಅವಕಾಶವಿರುವುದಿಲ್ಲ.

ಮುಂದುವರೆದು ಅವಶ್ಯಕತೆಗೆ ಅನುಗುಣವಾಗಿ ಮೇಲಾಧಿಕಾರಿಗಳು ಸೂಚಿಸಿದಾಗ ಕೋವಿಡ್-19 ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದೆಂದು ಈ ಮೂಲಕ ಸೂಚಿಸಿದೆ.

ಪ್ರಾಂಶುಪಾಲರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

**ಪ್ರತಿಯನ್ನು:**

1. ನಿರ್ದೇಶಕರು ಹಿಮ್ಸ್, ಹಾಸನ ಇವರ ಮಾಹಿತಿಗಾಗಿ.
2. ವೈದ್ಯಕೀಯ ಅಧೀಕ್ಷಕರು, ಹಿಮ್ಸ್, ಬೋಧಕ ಆಸ್ಪತ್ರೆ, ಹಾಸನ ಇವರಿಗೆ ಮಾಹಿತಿಗಾಗಿ.
3. ಆರ್ಥಿಕ ಸಲಹೆಗಾರರು, ಹಿಮ್ಸ್, ಹಾಸನ ಇವರ ಮಾಹಿತಿಗಾಗಿ.
4. ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ.
5. ಕಡ್ಡಾಯ ಸೇವೆಗಾಗಿ ಹಿಮ್ಸ್, ಸಂಸ್ಥೆಗೆ ನಿಯುಕ್ತಿಗೊಳಿಸಲಾದ ಎಲ್ಲಾ ಅಭ್ಯರ್ಥಿಗಳಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.

10